**ಒ.ಎಸ್.ನಂ. 104/2021**
**ಡಿ. ಡಬ್ಲೂ-2**

**ದಿನಾಂಕಃ 09.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲು :- ವಾದಿ ಪರ ವಕೀಲರಿಂದಃ-**

ನಾನು ಎಮ್.ಎ ಪದವಿದರ. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರ ತಯಾರಿಸಲು ನಾನೇ ಮಾಹಿತಿ ಕೊಟ್ಟಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಿದ್ಯಾರಣ್ಯಪುರಂ ಮೈಸೂರು ಎಂದು ತೋರಿಸಿದ್ದು, ಪ್ರತಿವಾದಿಗಳಿಗೂ ನಿಮಗೂ ಹೇಗೆ ಪರಿಚಯ ಎಂದರೆ ನಾನು ಮೂಲತಃ ಮುಳ್ಳೂರು ಗ್ರಾಮದವರು ಎಂದು ನುಡಿಯುತ್ತಾರೆ. ನಾನು ಮುಳ್ಳೂರು ವಾಸ ಇದ್ದೆ ಎಂದು ತೋರಿಸಲು ದಾಖಲು ಹಾಜರುಪಡಿಸುತ್ತೇನೆ. ಪ್ರತಿವಾದಿ 1 ಅವರಿಗೆ ಇಬ್ಬರು ಮಕ್ಕಳು. ಪ್ರತಿವಾದಿ 1 ಅವರ ತಂದೆ ಹೆಸರು ಗೊತ್ತಿಲ್ಲ. ಸರ್ವೇ ನಂಬರ್ 89/4 ರ ಪಹಣಿ ಯನ್ನು ನೋಡಿರುತ್ತೇನೆ. ಸದರಿ ಸರ್ವೇ ನಂಬರ್ ನಲ್ಲಿ ಪ್ರಸ್ತುತ 2 ಎಕರೆ ಇರುತ್ತದೆ. ನಿಪಿ-3 ರ ಪಹಣಿಯನ್ನು ಸಾಕ್ಷಿಗೆ ತೋರಿಸಿ ಸರ್ವೇ ನಂಬರ್ 89/4 ರಲ್ಲಿ 1 ಎಕರೆ 9.08 ಗುಂಟೆ ಇರುತ್ತದೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ಸುಮಾರು 19 ವರ್ಷಗಳಿಂದ ಸ್ವಾಧೀನ ಇದ್ದಾರೆ ಎಂದು ಹೇಳಿದ್ದು, ಯಾವ ಆಧಾರದ ಮೇಲೆ ಹೇಳುತ್ತೀರಾ ಎಂದರೆ ಗ್ರಾಮಲೆಕ್ಕಾಧಿಕಾರಿ ಪ್ರತಿವಾದಿಗಳು ಸ್ವಾಧೀನದಲ್ಲಿ ಇದ್ದಾರೆ ಎಂದು ಬರೆದುಕೊಟ್ಟಿರುವ ಪತ್ರ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ಸರ್ವೇ ನಂಬರ್ 89/4 ರ ಆಜು-ಬಾಜುದಾರನಲ್ಲ. ಪ್ರತಿವಾದಿ ಸ್ವಾಧೀನ ಇರುವ ಜಮೀನು ಚೆಕ್ಕುಬಂದಿ ಪೂರ್ವಕ್ಕೆ ಹಳ್ಳ, ಪಶ್ಚಿಮಕ್ಕೆ ಸುಬ್ರಮಣ್ಯಂ, ಉತ್ತರಕ್ಕೆ ಈರಯ್ಯ ಮತ್ತು ದಕ್ಷಿಣಕ್ಕೆ ಸ್ವಾಮಿ. ವಾದಿ ದಾವೆ ಸಲ್ಲಿಸಿರುವ ಜಮೀನಿನ ಚೆಕ್ಕುಬಂದಿ ತಿಳಿದುಕೊಂಡಿರುತ್ತೇನೆ. ಮುಳ್ಳೂರಿನ ಅಶೋಕ ಕುಮಾರ್, ಶ್ರೀನಿವಾಸ ಮೂರ್ತಿ ಮತ್ತು ಸೀತಾರಾಮ ಪರಿಚಯ ಇರುತ್ತಾರೆ. ವಾದಿಗೆ ಕ್ರಯ ಮಾಡಿಕೊಳ್ಳುವ ಮೊದಲು ಸದರಿ ಆಸ್ತಿ ಮೇಲೆ ಹೇಳಿದ 3 ಜನರ ಹೆಸರಿನಲ್ಲಿ ಇತ್ತು ಎಂದರೆ ಅಶೋಕ ಕುಮಾರ್, ಶ್ರೀನಿವಾಸ ಮೂರ್ತಿ ಹೆಸರಿನಲ್ಲಿ ಜಂಟಿ ಖಾತೆ ಇತ್ತು ಎಂದು ನುಡಿಯುತ್ತಾರೆ. ದಿಃ11.07.2019 ರಂದು ವಾದಿ ಕ್ರಯಕ್ಕೆ ಪಡೆದಿದ್ದು ಅಂದಿನಿಂದ ದಾವಾ ಸ್ವತ್ತಿನ ಸ್ವಾಧೀನ ದಲ್ಲಿ ಇದ್ದಾರೆ ಎಂದರೆ ಪ್ರತಿವಾದಿ 1 ಸಹ ಇದ್ದಾರೆ ಎಂದು ನುಡಿಯತ್ತಾರೆ. ಸಾಕ್ಷಿ

ಸರ್ವೇ ನಂಬರ್ 89/4, 89/9 ಪಹಣಿಯನ್ನು ತೋರಿಸಿದ್ದು ಸಾಕ್ಷಿ ಗುರುತಿಸಿದ್ದು ಸದರಿ ಪಹಣಿಯನ್ನು ನಿಪಿ-15 ಮತ್ತು 16 ಎಂದು ಗುರುತಿಸಲಾಯಿತು.

ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದಲ್ಲಿ ಪ್ರತಿವಾದಿ 1 ರವರು ವಾದಿ ವಿರುದ್ಧ ದಾವೆ ಸಲ್ಲಿಸಿದ್ದಾರೆ ಹೇಳಿದ್ದು ಯಾವ ಪರಿಹಾರ ಮತ್ತು ಯಾವ ಸ್ವತ್ತಿಗೆ ಸಂಬಂಧಪಟ್ಟಂತೆ ದಾವೆ ಹಾಕಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಸರ್ವೇ ನಂಬರ್ 89/4 ರ ಜಮೀನು ನನಗೆ ಸೇರಬೇಕು ಕರಾರು ಪತ್ರ ಆದಾರದ ಮೇಲೆ ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರು ಕರಾರು ಪತ್ರದ ಆದಾರದ ಮೇಲೆ ಸ್ವಾಧೀನ ಪಡೆದುಕೊಂಡಿರುತ್ತಾರೆ, ಸದರಿ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿದ್ದು ಅದು ನೋಂದಾಯಿತವಲ್ಲದ ಕರಾರು ಪತ್ರ ಆಗಿರುತ್ತದೆ. ಸದರಿ ಕರಾರು ಪತ್ರ ಸೀತಾರಾಮ ಮತ್ತು ಪ್ರತಿವಾದಿ 1 ರ ನಡುವೆ ಆಗಿರುತ್ತದೆ. ಸದರಿ ಕರಾರು ಪತ್ರದಲ್ಲಿ ಸ್ವಾಧೀನ ಬಿಟ್ಟು ಕೊಟ್ಟಿರುತ್ತೇವೆ ಎಂದು ನಮೂದು ಮಾಡಿರುತ್ತಾರೆ. ಪ್ರತಿವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.**